


ಅರಮನೆಯ ಮೇಲಂತಸ್ತಿನ ಆಕರ್ಷಕ ಬೋದಿಗೆ



ಅರಮನೆಯ ಗೋಡೆ ಮೇಲೆ ಚಿತ್ರಿಸಿದ ಯುದ್ಧದ ಸನ್ನಿವೇಶ



ವರ್ಣಗಳಿಂದ ಇವುಗಳನ್ನು ಚಿತ್ರಿಸಲಾಗಿದೆ. ಪುರಾಣಗಳಲ್ಲಿ ಬರುವ 'ವ್ಯೂಮ' ಹೆಸರಿನ ವಿಶಿಷ್ಟ ಜಾಣ್ಮೆಯ ಪಕ್ಷಿಯನ್ನು ಈ ಅರಮನೆಯ ಪೂರ್ವ ಗೋಡೆಯ ಮೇಲೆ ನೋಡಬಹುದು.

**ಪಶ್ಚಿಮ ಗೋಡೆ:** ಅರಮನೆಯ ಪಶ್ಚಿಮ ಗೋಡೆಯನ್ನು ಅಪರೂಪದಲ್ಲಿ ಅಪರೂಪ ಎಂದೇ ಹೇಳಲಾಗುತ್ತದೆ. ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷರ ನಡುವೆ ನಡೆದ ಮಹತ್ವದ ಯುದ್ಧಗಳ ಸನ್ನಿವೇಶಗಳನ್ನು ಬ್ರಿಟಿಷ್ ಕಲಾವಿದರು ನೈಜ ಎಂಬಷ್ಟರ ಮಟ್ಟಿಗೆ ಚಿತ್ರಿಸಿದ್ದಾರೆ. ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಯುದ್ಧಕ್ಕೆ ತೆರಳುತ್ತಿರುವ ದೃಶ್ಯ ಇಲ್ಲಿದೆ. ಮೈಸೂರು ಸೇನೆ ಮತ್ತು ಬ್ರಿಟಿಷ್ ಸೇನೆ ನಡುವೆ ನಡೆಯುತ್ತಿರುವ ಯುದ್ಧ, ಮೈಸೂರು ಸೇನೆ ಜತೆಗೆ ಫ್ರೆಂಚ್ ಸೇನಾ ತುಕಡಿಗಳು ಸೇರಿಕೊಂಡಿರುವುದರ ಚಿತ್ರಣವಿದೆ.

ಟಿಪ್ಪು ಸುಲ್ತಾನ್ ಶತ್ರು ಪಾಳಯದ ಮೇಲೆ ಕೊಬ್ಬಿದ ಗೂಳಿಗಳನ್ನು ನುಗ್ಗಿಸಿ ಅಲ್ಲೋಲಕಲ್ಲೋಲ ಮಾಡುತ್ತಿದ್ದ ಎಂಬ ಮಾತಿಗೆ ಈ ಗೋಡೆಯ ಮೇಲೆ ಸ್ಪಷ್ಟವಾದ ಸಾಕ್ಷ್ಯವಿದೆ. ಕಾಲಾಳುಗಳ ಜತೆಗೆ ಗಜ ಮತ್ತು ಅಶ್ವ ಪಡೆ ಧೂಳೆಬ್ಬಿಸಿ ಮುನ್ನುಗ್ಗುತ್ತಿರುವ ಸನ್ನಿವೇಶ ಆಕರ್ಷಕವಾಗಿದೆ. ಬ್ರಿಟಿಷ್ ಸೈನಿಕರು ಆಧುನಿಕ ಶಸ್ತ್ರಾಸ್ತ್ರಗಳ ಜತೆ ಕರ್ನಲ್ ಬೇಯ್‌ಲಿಯ ರಕ್ಷಣೆಗೆ ನಿಂತಿರುವುದು ಕಂಡು ಬರುತ್ತದೆ. 1799ರ ಮೇ 4ರಂದು ಶ್ರೀರಂಗಪಟ್ಟಣ ಪತನಗೊಂಡ ಸನ್ನಿವೇಶವನ್ನು ಬ್ರಿಟಿಷ್ ಕಲಾವಿದ ಸರ್ ರಾಬರ್ಟ್ ಪೋರ್ಟರ್ 1800ರ ಸುಮಾರಿಗೆ ಈ ಗೋಡೆಗಳ ಮೇಲೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

**ಮರದ ಅರಮನೆ:** ದರಿಯಾ ದೌಲತ್ ಅರಮನೆಯನ್ನು ಶೇಕಡಾ 80 ಭಾಗ ಮರಗಳನ್ನೇ ಬಳಸಿ ನಿರ್ಮಿಸಲಾಗಿದೆ. ತೇಗ, ಸಾಗುವಾನಿ ಮರಗಳ ಬೃಹತ್ ಸ್ತಂಭಗಳು ಈ ಅರಮನೆಗೆ ಆಧಾರವಾಗಿವೆ. ಛಾವಣಿ, ಮೇಲ್ಕಟ್ಟು, ಚೌಕಟ್ಟು, ಬೋದಿಗೆಗಳು ಕೂಡ ಮರದಿಂದಲೇ ನಿರ್ಮಾಣಗೊಂಡಿವೆ. ಅರಮನೆಯ ಪ್ರತಿಯೊಂದು ಭಾಗವೂ ಕಲಾತ್ಮಕ ಕುಸುರಿ ಕೆತ್ತನೆಗಳಿಂದ ಕೂಡಿದೆ. 230 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಈ ಅರಮನೆಯ ಮರದ ವಸ್ತುಗಳು ಲವಲೇಶವೂ ಮುಕ್ಕಾಗಿಲ್ಲ.

ಈ ಭವ್ಯ ಮಹಲಿನ ದಕ್ಷಿಣ ಭಾಗದ ಗೋಡೆಯ ಮೇಲಿರುವ ಯುವ ರಾಜ ಟಿಪ್ಪುವಿನ ಮೂರು ಆಯಾಮದ ತೈಲ ಚಿತ್ರ ಗಮನ ಸೆಳೆಯುತ್ತದೆ. ಇದನ್ನು ಬ್ರಿಟಿಷ್ ಕಲಾವಿದ ಜಾನ್ ಎಫ್.ಕೆರ್ರಿ 1792ರಲ್ಲಿ ಚಿತ್ರಿಸಿದ್ದಾನೆ ಎಂದು ಹೇಳಲಾಗುತ್ತದೆ. ಬ್ರಿಟಿಷ್ ಅಧಿಕಾರಿಗಳಾದ ಜನರಲ್ ಬೇಯರ್ಡ್, ಸಾರ್ಜೆಂಟ್ ಗ್ರಹಾಂ, ಕರ್ನಲ್ ಡನ್‌ಲಪ್ ಅವರ ಭಾವಚಿತ್ರಗಳು ಕೂಡ ಆಕರ್ಷಕವಾಗಿವೆ. ಒಳ ಭಾಗದಲ್ಲಿ 18 ಪೆನ್ಸಿಲ್ ಚಿತ್ರಗಳಿದ್ದು, ಇದರಲ್ಲಿ ಟಿಪ್ಪುವಿನ 7 ಮಕ್ಕಳ ಚಿತ್ರಗಳೂ ಸೇರಿವೆ.

ಈ ಎರಡಂತಸ್ತಿನ ಅರಮನೆಯನ್ನು 1957ರಲ್ಲಿ 'ರಾಷ್ಟ್ರೀಯ ಸ್ಮಾರಕ' ಎಂದು ಘೋಷಿಸಲಾಗಿದೆ. 'ಏಕ ವ್ಯಕ್ತಿ ವಸ್ತುಸಂಗ್ರಹಾಲಯ' ಎಂದು ಕರೆಸಿಕೊಳ್ಳುವ ಈ ಸ್ಮಾರಕ ಸದ್ಯ ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣ (ಎಎಸ್ಐ) ಸುಪರ್ದಿಯಲ್ಲಿದೆ. ಸ್ಮಾರಕದ ಒಳಭಾಗದಲ್ಲಿ ಟಿಪ್ಪು ಬಳಸುತ್ತಿದ್ದ ಬಿಚ್ಚುಗತ್ತಿ, ಕಠಾರಿ, ಒರೆಗತ್ತಿ, ಗುರಾಣಿ ಇತರ ಶಸ್ತ್ರಾಸ್ತ್ರಗಳನ್ನು ಇಡಲಾಗಿದೆ. ಆತ ಧರಿಸುತ್ತಿದ್ದ ವಸ್ತ್ರಗಳು, ಊಟದ ಪಾತ್ರೆಗಳು, ಅಂದು ಚಲಾವಣೆಯಲ್ಲಿದ್ದ ಅಸ್ರಫಿ ಇತರ ಹೆಸರಿನ ನಾಣ್ಯಗಳು ಹಾಗೂ ಪೀಠೋಪಕರಣಗಳನ್ನು ಸಂರಕ್ಷಿಸಿ ಇಡಲಾಗಿದೆ.

ಶ್ರೀರಂಗನಾಥಸ್ವಾಮಿ ದೇವಾಲಯದ ಪೂರ್ವಕ್ಕೆ, ಕಾವೇರಿ ನದಿಯ ಎಡ ಕೋಡಿನ ಬಲ ದಂಡೆಯಲ್ಲಿರುವ ಈ ಅರಮನೆ 16 ಎಕರೆ ವಿಸ್ತೀರ್ಣದ ಸುಂದರ ಉದ್ಯಾನವನದ ಮಧ್ಯೆ ಶೋಭಾಯಮಾನವಾಗಿದೆ. ಬೇಸಿಗೆ ಅರಮನೆಯ ಉತ್ತರ ಭಾಗದಿಂದ ನದಿಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದ್ದು, ನೂರಿನ್ನೂರು ವರ್ಷಗಳ ಅಪರೂಪದ ಮರಗಳು ಉದ್ಯಾನದ ಅಲ್ಲಲ್ಲಿ ಕಾಣಸಿಗುತ್ತವೆ. ಅರಮನೆಯ ಪ್ರವೇಶ ದ್ವಾರದ ಎಡ ಮತ್ತು ಬಲ ಭಾಗದಲ್ಲಿ ಒಂದೊಂದು ಡವ್ ಕೋಟ್‌ಗಳಿವೆ. ಅಂಚೆ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ಊರಿಂದ ಊರಿಗೆ, ರಾಜಧಾನಿಯಿಂದ ಸೇನಾ ನೆಲೆಗಳಿಗೆ ಅಂಚೆ ಪತ್ರಗಳನ್ನು ರವಾನಿಸಲು ತರಬೇತಿ ಪಡೆದ ಪಾರಿವಾಳಗಳನ್ನು ಬಳಸಲಾಗುತ್ತಿತ್ತು. ಅಂತಹ ಪಾರಿವಾಳಗಳಿಗೆ ಆಶ್ರಯ ನೀಡಲೆಂದೇ ಟಿಪ್ಪು ಕಾಲದಲ್ಲಿ ಈ ಡವ್ ಕೋಟ್‌ಗಳು ನಿರ್ಮಾಣಗೊಂಡಿದ್ದು, ಈಗಲೂ ಸುಸ್ಥಿತಿಯಲ್ಲಿವೆ.